ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಸಿ-2/ಬಿಇಡಿ/206/11-12(ಭಾಗ-2)

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560012.
ದಿನಾಂಕ: 10-05-2017.

## ಸುತ್ತೋಲೆ

ವಿಷಯ: 2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಿ.ಇಡಿ ಪದವಿಯನ್ನು ಪಡೆಯದೇ ಉಪನ್ಯಾಸಕರಾಗಿ ನೇಮಕಗೊಂಡ ನಂತರ ಬಿ.ಇಡಿ ಪದವಿಯನ್ನು ಪಡೆದಿರುವವರ ಮಾಹಿತಿ ಒದಗಿಸುವ ಕುರಿತು.

****

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ ಉಪನ್ಯಾಸಕ ಹುದ್ದೆಗಳಲ್ಲಿ 2013ನೇ ಸಾಲಿನಲ್ಲಿ 1763 ಉಪನ್ಯಾಸಕ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ. ಸದರಿ ನೇಮಕಾತಿಯಲ್ಲಿ ಆಯ್ಕೆಯಾದ ಉಪನ್ಯಾಸಕರುಗಳಲ್ಲಿ ಕೆಲವು ಉಪನ್ಯಾಸಕರು ಬಿ.ಇಡಿ. ಪದವಿಯನ್ನು ಹೊಂದಿರುತ್ತಾರೆ. ಆದರೆ ಕೆಲವು ಉಪನ್ಯಾಸಕರು ಬಿ.ಇಡಿ. ಪದವಿಯನ್ನು ಹೊಂದಿರುವುದಿಲ್ಲ. ಹೀಗೆ ಬಿ.ಇಡಿ ಪದವಿಯನ್ನು ಪಡೆಯದೇ ನೇಮಕಗೊಂಡ ನಂತರ ಬಿ.ಇಡಿ ಪದವಿಯನ್ನು KSOU, IGNOU ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಬಿ.ಇಡಿ ಪದವಿಯನ್ನು ಪಡೆದಿರುವಂತಹ ಎಲ್ಲಾ ಉಪನ್ಯಾಸಕರು ತಾವು ಬಿ.ಇಡಿ ಪದವಿಗೆ ಸೇರಿದ ವರ್ಷ, ದಾಖಲಾತಿ ಪಡೆದು ಕಾಲೇಜು ಹಾಗೂ ವಿಶ್ವ ವಿದ್ಯಾನಿಲಯ, ಮತ್ತು ಪದವಿಯನ್ನು ಪೂರ್ಣಗೊಳಿಸಿ ಉತ್ತೀರ್ಣರಾದ ವರ್ಷ ಮುಂತಾದ ಮಾಹಿತಿಗಳನ್ನು ಜಿಲ್ಲಾ ಉಪ ನಿರ್ದೇಶಕರು, ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಉಪನ್ಯಾಸಕರಿಂದ ಪಡೆದು ಇಂದೇ ಇಲಾಖಾ ಈ-ಮೈಲ್ ವಿಳಾಸ pueadma@gmail.com ಗೆ ಕಳುಹಿಸಲು ತಿಳಿಸಿದೆ. ಈ ಸುತ್ತೋಲೆಯನ್ನು ಗಮನಿಸಿದ ಉಪನ್ಯಾಸಕರು ಕೂಡಾ ತಾವು 2013ರಲ್ಲಿ ನೇಮಕಾತಿಗೊಂಡಿದ್ದು ನಂತರ ಮೇಲ್ಕಂಡಂತೆ ಬಿ.ಇಡಿ ಪದವಿಯನ್ನು ಪಡಿದಿದ್ದಲ್ಲಿ ಎರಡು (02) ದಿನಗಳ ಒಳಗಾಗಿ ನೇರವಾಗಿ ಈ-ಮೈಲ್ ಮಾಡಲು ಸೂಚಿಸಿದೆ. ಜಿಲ್ಲಾ ಉಪ ನಿರ್ದೇಶಕರು ಈ ವಿಷಯವನ್ನು ಅತ್ಯಂತ ಜರೂರೆಂದು ಭಾವಿಸತಕ್ಕದ್ದು.

10/5/17

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ನಿರ್ದೇಶಕರ ಆಪ್ತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು.
2. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು (ಆಡಳಿತ) ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು-ಇವರಿಗೆ ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು-ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
4. ಕಚೇರಿ ಪ್ರತಿ.

## ನಮೂನೆ

**2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ನೇಮಕಗೊಂಡ ನಂತರ ಬಿ.ಇಡಿ ಪಡೆದ ಉಪನ್ಯಾಸಕರ ವಿವರ**

| ಕ್ರ.ಸಂ | ಉಪನ್ಯಾಸಕರ ಹೆಸರು | ಬೋಧನಾ ವಿಷಯ | ಬಿ.ಇಡಿ ಪದವಿಗೆ ದಾಖಲಾದ ವರ್ಷ & ಕಾಲೇಜಿನ ವಿಳಾಸ | ಬಿ.ಇಡಿ ಪದವಿ ತೇರ್ಗಡೆಯಾದ ವರ್ಷ | ಬಿ.ಇಡಿ ಪದವಿ ಪಡೆದ ವಿಶ್ವ ವಿದ್ಯಾಲಯ | ಷರಾ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |

ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
----------------ಜಿಲ್ಲೆ.